(ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆಗಳನ್ನು ವಿಧೇಯಕಕ್ಕೆ ಸೇರಿಸಲಾಯಿತು)

ಪ್ರಸ್ತಾವದ ಅಂಗೀಕಾರ

ಶ್ರೀ ಬಿ.ಎಸ್.ಯಡಿಯೂರಪ್ಪ (ಉಪ ಮುಖ್ಯಮಂತ್ರಿ): ಮಾನ್ಯ ಅಧ್ಯಕ್ಷರೆ, 2007ನೇ ಸಾಲಿನ ಕರ್ನಾಟಕ ಅಬ್ಕಾರಿ (ತಿದ್ದುಪಡಿ) ವಿಧೇಯಕವನ್ನು ಅಂಗೀಕರಿಸಬೇಕೆಂದು ಕೋರುತ್ತೇನೆ.

ಅಧ್ಯಕ್ಷರು:– ಪ್ರಸ್ತಾವ ಏನೆಂದರೆ,

"2007ನೇ ಸಾಲಿನ ಕರ್ನಾಟಕ ಅಬ್ಕಾರಿ (ತಿದ್ದುಪಡಿ) ವಿಧೇಯಕವನ್ನು ತಿದ್ದುಪಡಿ ಮಾಡಿರುವಂತೆ ಅಂಗೀಕರಿಸುವುದು"

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಮಸೂದೆಗೆ ಒಪ್ಪಿಗೆ ನೀಡಲಾಯಿತು

ಅನುಬಂಧ–1

2. ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯಗಳ (ತಿದ್ದುಪಡಿ) ವಿಧೇಯಕ, 2007 ಮಂಡನೆಗೆ ಅನುಮತಿ ಕೋರಿಕೆ

ಶ್ರೀ ಡಿ.ಹೆಚ್.ಶಂಕರಮೂರ್ತಿ (ಉನ್ನತ ಶಿಕ್ಷಣ ಸಚಿವರು:– 2007ನೇ ಸಾಲಿನ ಕರ್ನಾಟಕ ವಿಶ್ವವಿದ್ಯಾನಿಲಯಗಳ (ತಿದ್ದುಪಡಿ) ವಿಧೇಯಕವನ್ನು ಮಂಡಿಸಲು ತಮ್ಮ ಅನುಮತಿ ಕೋರುತ್ತೇನೆ.

ಅಧ್ಯಕ್ಷರು:– ಪ್ರಸ್ತಾವ ಏನೆಂದರೆ,

"2007ನೇ ಸಾಲಿನ ಕರ್ನಾಟಕ ವಿಶ್ವವಿದ್ಯಾನಿಲಯಗಳ (ತಿದ್ದುಪಡಿ) ವಿಧೇಯಕವನ್ನು ಮಂಡಿಸಲು ತಮ್ಮ ಅನುಮತಿ ನೀಡುವುದು"

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಅನುಮತಿ ನೀಡಲಾಯಿತು

ಶ್ರೀ ಡಿ.ಹೆಚ್.ಶಂಕರಮೂರ್ತಿ (ಉನ್ನತ ಶಿಕ್ಷಣ ಸಚಿವರು):– 2007ನೇ ಸಾಲಿನ ಕರ್ನಾಟಕ ವಿಶ್ವವಿದ್ಯಾನಿಲಯಗಳ (ತಿದ್ದುಪಡಿ) ವಿಧೇಯಕವನ್ನು ಸಭೆಯ ಮುಂದೆ ಮಂಡಿಸುತ್ತೇನೆ.

ಅಧ್ಯಕ್ಷರು:– ವಿಧೇಯಕವನ್ನು ಮಂಡಿಸಲಾಗಿದೆ.

ವಿಧೇಯಕವನ್ನು ಪರ್ಯಾಲೋಚಿಸುವುದು ಹಾಗೂ ಅಂಗೀಕರಿಸುವುದು

ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯಗಳ (ತಿದ್ದುಪಡಿ) ವಿಧೇಯಕ, 2007
ಪರ್ಯಾಲೋಚನಾ ಪ್ರಸ್ತಾವ

ಶ್ರೀ ಡಿ.ಹೆಚ್.ಶಂಕರಮೂರ್ತಿ (ಉನ್ನತ ಶಿಕ್ಷಣ ಸಚಿವರು):– 2007ನೇ ಸಾಲಿನ ಕರ್ನಾಟಕ ವಿಶ್ವವಿದ್ಯಾನಿಲಯಗಳ (ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸಬೇಕೆಂದು ಕೋರುತ್ತೇನೆ.

ಪ್ರಸ್ತಾವವನ್ನು ಮಂಡಿಸಲಾಯಿತು

ಶ್ರೀ ಡಿ.ಹೆಚ್.ಶಂಕರಮೂರ್ತಿ (ಉನ್ನತ ಶಿಕ್ಷಣ ಸಚಿವರು):– ಮಾನ್ಯ ಅಧ್ಯಕ್ಷರೆ, Universities Act ಗೆ ಒಂದು ಸಣ್ಣ ತಿದ್ದುಪಡಿಯನ್ನು ತರುತ್ತಿದ್ದೇನೆ. ಅದೇನೆಂದರೆ, ಯೂನಿವರ್ಸಿಟಿಗಳಿಗೆ ಸಿಂಡಿಕೇಟ್‌ಗಳನ್ನು ನಾವು ನಾಮಿನೇಟ್ ಮಾಡುತ್ತೇವೆ. ಅಂದರೆ, ಸಿಂಡಿಕೇಟ್‌ಗೆ ಸದಸ್ಯರನ್ನು ನಾವು ನೇಮಕ ಮಾಡುತ್ತೇವೆ. Academic Council and Syndicate ಎರಡಕ್ಕೂ ಸರ್ಕಾರದ ಕಡೆಯಿಂದ ನಾಮಿನೇಟ್ ಮಾಡುತ್ತೇವೆ. ಸಿಂಡಿಕೇಟ್ ಎನ್ನತಕ್ಕಂಥದು continuous body. ಇದಕ್ಕೆ Fixed term ಅಂದರೆ, ಇವತ್ತು ಮುಗಿದು ಹೋಗುತ್ತದೆ. ಇವತ್ತಿನಿಂದ ಬೇರೆಯವರು ಎನ್ನುವ ರೀತಿ ಇಲ್ಲ. ಕೆಲವು ಸದಸ್ಯರು ನಿವೃತ್ತರಾಗುತ್ತಿರುತ್ತಾರೆ. ಆ ಜಾಗಕ್ಕೆ ಹೊಸ ಸದಸ್ಯರು ಬರುತ್ತಾ ಇರುತ್ತಾರೆ. ನಮ್ಮ ವಿಧಾನ ಪರಿಷತ್ತು ಇದ್ದ ಹಾಗೆ, It is a continuous body. ಇದರ ಬಗ್ಗೆ 2000ನೇ ಇಸವಿಯಲ್ಲಿ ಆಕ್ಟ್ ಮಾಡುವಾಗ ಸಣ್ಣ ಒಂದು ಲೋಪವಾಗಿದೆ. Academic Council ಮಾಡಿರತಕ್ಕಂಥ ಪದ ಪ್ರಯೋಗ ಸರಿಯಿದೆ. ಆದರೆ, ಸಿಂಡಿಕೇಟ್‌ಗೆ ನಾವು ನಾಮಿನೇಟ್ ಮಾಡತಕ್ಕಂತದರಲ್ಲಿ ಏನಾಗಿದೆಯೆಂದರೆ, 3 ವರ್ಷ ಅಥವಾ ಅದು